# 'ಗುಳಿ'ಯಲ್ಲಿ ಬಿದ್ದವರು...

ಕೈ ಕುಲುಕಿದ ಮಾಧ್ಯಮ ಮಿತ್ರ ಕ್ಷಣ ಪೆಚ್ಚಾಗಿದ್ದರು. ಆ ನಟೀಮಣಿಯು ಭರ್ತಿ ಐದು ನಿಮಿಷ ಹಿಡಿದ ಕೈಯನ್ನು ಬಿಡದೇ ಇದ್ದುದರಿಂದ ವಯೋಸಹಜವಾಗಿಯೇ ಅವರಿಗೆ ಮೈ ಬಿಸಿಯಾಗಿತ್ತು. ಅನೌಪಚಾರಿಕ ಮಾತುಕತೆಯಲ್ಲಿ ಹುಡುಗಿ ಕುಳಿತ ಮೇಲಂತೂ ಅವರ ದೇಹದ ತಾಪಮಾನ ಕಡಿಮೆಯಾಗುವ ಲಕ್ಷಣ ಕಾಣಲಿಲ್ಲ. ಆಸೆಯ ಹೋಮಕ್ಕೆ ತುಪ್ಪ ಸುರಿಯುವಂತೆ, ನಟಿ ತಾನು ಮೇಕಪ್ ಮಾಡಿಕೊಳ್ಳಲು ಬಳಸುವ ಸಾಧನಗಳೇನು ಎಂದು ಒಂದೊಂದಾಗಿ ಹೇಳತೊಡಗಿದರು. ತಮ್ಮ ವದನಾರವಿಂದ ಹಾಗೂ ಗುಂಗುರು ಕೂದಲಿನ ಗುಟ್ಟನ್ನು ಹೇಳಿಕೊಳ್ಳಲೂ ನಿರಾಕರಿಸಲಿಲ್ಲ. ಅಷ್ಟೇ ಏಕೆ, ಕೆನ್ನೆ ಮೇಲೆ ಬೀಳುವ ಸಣ್ಣ ಗುಳಿಯ ಕುರಿತು ಅವರಿಗೆ ಹೆಮ್ಮೆ ಇತ್ತು. ಸುದ್ದಿಮಿತ್ರರ ಗುಂಪಿನಲ್ಲೇ ಒಬ್ಬರು, ಆ ನಟಿ ಪರಭಾಷಾ ಚಿತ್ರವೊಂದರಲ್ಲಿ ಮಳೆಯಲ್ಲಿ ಮೀಯುತ್ತಾ, ಅಧರ ಚುಂಬನಕ್ಕೆ ಒಡ್ಡಿಕೊಂಡಿದ್ದ ಹಾಡಿನ ಪ್ರಸ್ತಾಪ ಮಾಡಿದರು. ಅವೆಲ್ಲಾ ಆರಂಭಿಕ ದಿನಗಳ ಅನಿವಾರ್ಯತೆ ಎಂದು ನಟೀಮಣಿ ನಗು ತುಳುಕಿಸಿದರು. ಸಣ್ಣಗೆ ಕಣ್ಣು ಮಿಟುಕಿಸಿದರು.

ನಟಿಯದ್ದು ಮೊಗ್ಗಿನ ಮನಸ್ಸು ಎಂದು ಭಾವಿಸಿ ಪ್ರತಿಭಾವಂತ ನಿರ್ದೇಶಕರೊಬ್ಬರು ಅವಕಾಶ ಕೊಟ್ಟರು. ಗುಂಗುರು ಕೂದಲು, ಮುಗ್ಧ ಕಣ್ಣೋಟಕ್ಕೆ ಅನೇಕರು ಶಹಬ್ಬಾಸ್ ಕೊಟ್ಟರು.

ಕಲಾ ಸಾಮ್ರಾಟರ ಸಾಲಿಗೆ ಸೇರುವ ನಿರ್ದೇಶಕರೊಬ್ಬರು ಆ ಕಾಲಘಟ್ಟದಲ್ಲಿ ಗೆಲ್ಲುವ ಕುದುರೆಯಾಗಿಬಿಟ್ಟಿದ್ದ ಕಪ್ಪು ಬಣ್ಣದ, ಹುರಿಗಟ್ಟಿದ ದೇಹದ ನಾಯಕ ನಟನ ಕಾಲ್‌ಷೀಟ್ ಪಡೆದುಕೊಂಡಿದ್ದರು. ಆ ನಾಯಕನಿಗೆ ಹೊಂದುವ ಕಚ್ಚಾ ಪಾತ್ರಗಳ ಹೂರಣವನ್ನು ಎಲ್ಲೆಲ್ಲಿಂದ ಸಾಧ್ಯವೋ ಎಲ್ಲಾ ಕಡೆಯಿಂದ ಹೆಕ್ಕಿ, ತಾವು ಭಾವಿಸಿದ ಒಂದು ಸ್ಕ್ರೀನ್‌ಪ್ಲೇಯ ಹೋಳಿಗೆಯನ್ನು ಮಾಡಿಯೇಬಿಟ್ಟರು. ನಾಯಕಿಯಾಗಿ ಈ ನಟಿಯನ್ನು ಹಾಕಿಕೊಂಡರು. ಅಲ್ಲೂ ನಾಯಕಿಗೆ ತಮ್ಮ ಗುಳಿಕೆನ್ನೆಯ ಮೇಲೆ ತುಂಬುವಿಶ್ವಾಸ. ಆ ಗುಳಿಯಲ್ಲಿ ನಾಯಕ ಬಿದ್ದಿದ್ದನ್ನು ಸಾಕ್ಷಾತ್ ನಿರ್ದೇಶಕರು ರೆಡ್‌ಹ್ಯಾಂಡೆಡ್ ಆಗಿ ಹಿಡಿದರು. ವಿಷಯ ಪ್ರಕೋಪಕ್ಕೆ ಹೋಯಿತು. ನಿರ್ದೇಶಕರಿಗೆ ಕೋಪ ಬಂತು. ನಾಯಕ ಡಬ್ ಮಾಡುವುದಿಲ್ಲ ಎಂದು ಹಟ ಹಿಡಿದರು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ವ್ಯಾಜ್ಯ ಪರಿಹಾರದ ಕಟ್ಟೆ ಏರಿದ್ದಾಯಿತು. ಕೊನೆಗೆ ನಾಯಕ ಡಬ್ ಮಾಡಿ, ಸಿನಿಮಾ ಬಿಡುಗಡೆಯಾಯಿತೆನ್ನಿ.

ನಾಯಕಿಗಾಗಿ ಇಷ್ಟೆಲ್ಲಾ ಹೋರಾಟ ಮಾಡಿದ ನಾಯಕ ಆಕೆಗಾಗಿ ಒಂದು ಅಪಾರ್ಟ್‌ಮೆಂಟೆಂಬ ಗೂಡನ್ನು ಮಾಡಿಕೊಟ್ಟರೆಂಬ ಗುಸುಗುಸು ಹರಿದಾಡಿತು. ನಾಯಕನ ಮನೆಯ ಹಬ್ಬಕ್ಕೆ ನಟೀಮಣಿ ಅತಿಥಿಯಾಗಿ ಬರುವುದು ಅಭ್ಯಾಸವಾಯಿತು. ಆಮೇಲೆ ನಾಯಕನ ಪತ್ನಿ ಚಾನೆಲ್ ಎದುರು ಅತ್ತೂ ಕರೆದೂ, ಆ ನಾಯಕ ತನ್ನ ಅಳಲನ್ನೂ ತೋಡಿಕೊಂಡು ಮನರಂಜನೆ ನೀಡಿದರು.

ಇಷ್ಟಾದ ಮೇಲೂ, ನಟೀಮಣಿ ಆರಕ್ಕೇರದೆ ಮೂರಕ್ಕೆ ಇಳಿಯದೆ ಸಿಕ್ಕ ಅವಕಾಶಗಳಲ್ಲಿ ಅಭಿನಯಿಸುತ್ತಾ ಇದ್ದಾರೆ. ಈಗ ಅವರು ಕೊಂಚ ದಪ್ಪಗಾಗಿದ್ದಾರೆ. ಕೆನ್ನೆ ಮೇಲಿನ ಗುಳಿ ಮಾತ್ರ ಹಾಗೇ ಇದೆ. ಅವರೀಗ ಕೈಕುಲುಕಲು ಮುಂದಾದಾಗ ಆ ಯುವ ಪತ್ರಕರ್ತರು ಎರಡು ನಿಮಿಷ ಯೋಚಿಸುತ್ತಾರೆ.

• ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68